# ರಾಘವೇಂದ್ರ ಖಾಸನೀಸರ ‘ಅಶ್ವಾರೋಹಿ’ ಒಂದು ವಿಶ್ಲೇಷಣೆ.

ಅಮರನಾಥ್ ಎನ್.[1] & ಸುಮಾ[2]

Article Link: https://aksharasurya.com/2023/10/amarnath-n-suma/

## ABSTRACT:

ನವ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ರಾಘವೇಂದ್ರ ಖಾಸನೀಸರು ಒಬ್ಬರು. ಕಡಿಮೆ ಸಂಖ್ಯೆಯ ಕತೆಗಳನ್ನು ರಚಿಸಿದರೂ ಸಹ ಅವುಗಳಲ್ಲಿ ಬಹುತೇಕ ಕತೆಗಳು ವಿಶೇಷವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ‘ಅಶ್ವಾರೋಹಿ’ ಕತೆ ಮನುಷ್ಯ ಸಮಾಜದ ಪ್ರತಿಬಿಂಬದಂತೆ ಕಾಣುತ್ತದೆ. ಇಲ್ಲಿ ಕಾಣುವ ಸಮಸ್ಯೆಗಳು ಸಮಾಜದ ಕೊಡುಗೆ ಆಗಿದ್ದರೂ, ಅದಕ್ಕೆ ಪರಿಹಾರ ಏನು ಎಂಬುದು ನಮ್ಮದೇ ಎನ್ನುವ ಪರಿಹಾರ ಸೂಚಿತ ಕಥಾತಂತ್ರವನ್ನು ಕತೆಯಲ್ಲಿ ಕಾಣಬಹುದು.

## KEY WORDS:

ಕುಟುಂಬ, ಆಧುನಿಕತೆ, ಶಿಕ್ಷಣ, ವಿಘಟನೆ, ಪರಿಹಾರ.

ರಾಘವೇಂದ್ರ ಖಾಸನೀಸರು ಕನ್ನಡದ ಪ್ರಮುಖ ಕಥೆಗಾರರಲ್ಲಿ ಒಬ್ಬರು. ಅವರ ಕಥೆಗಳು ಸಾಮಾಜಿಕ ಮತ್ತು ಮಾನಸಿಕ ವಿಷಯಗಳ ಆಳವಾದ ಅಧ್ಯಯನವನ್ನು ಪ್ರತಿಬಿಂಬಿಸುತ್ತವೆ. ಅವರು ಸಾಮಾನ್ಯ ಜನರ ಜೀವನದ ಸಂಕೀರ್ಣತೆಗಳನ್ನು ಸರಳ ಶೈಲಿಯಲ್ಲಿ ಚಿತ್ರಿಸುತ್ತಾರೆ. ಅವರ ಕಥೆಗಳು ಓದುಗರಲ್ಲಿ ಗಾಢವಾದ ಛಾಯೆಯನ್ನು ಬಿಡುತ್ತವೆ.

ಇವರು 02.03.1933ರಲ್ಲಿ ವಿಜಯಪುರದ ಜಿಲ್ಲೆಯ ಇಂಡಿಯಲ್ಲಿ ಜನಿಸಿದರು. ತಂದೆ ನಾರಾಯಣ ಖಾಸನೀಸ, ತಾಯಿ ಕಮಲಾಬಾಯಿ. ತಂದೆ ಚಿಕ್ಕ ವಯಸ್ಸಿನಲ್ಲೇ ಖಾಸನೀಸರಿಗೆ ಕತೆಗಳನ್ನು ಓದಿ ಹೇಳುತ್ತಿದ್ದರಿಂದ ಸಾಹಿತ್ಯದ ರುಚಿ ಸಣ್ಣ ವಯಸ್ಸಿನಿಂದಲೇ ಬೆಳೆದಿದೆ. ಈ ಅಂಶ ಅವರು ಕಥೆಗಾರರಾಗಿ ಬೆಳೆಯಲು ಕಾರಣವಾಯಿತು.

ಖಾಸನೀಸರು ತಮ್ಮ ಪ್ರೌಢಶಾಲಾ ದಿನಗಳಲ್ಲಿಯೇ ಕಥೆ ಬರೆಯಲು ಪ್ರಾರಂಭಿಸಿದರು. ಅವರ ಮೊದಲ ಕಥೆ 1958 ರಲ್ಲಿ ತಿ. ತಾ. ಶರ್ಮರ ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಯಿತು. ಅವರ ಪ್ರಮುಖ ಕಥೆಗಳೆಂದರೆ ‘ಬೇಡಿಕೊಂಡವರು’, ‘ಹೀಗೂ ಇರಬಹುದು!, ‘ತಬ್ಬಲಿಗಳು’, ‘ಅನಿರೀಕ್ಷಿತ’, ‘ಪ್ರತೀಕ್ಷೆ’ ಮುಂತಾದವು. ಇದೇ

1. ಸಹಾಯಕ ಪ್ರಾಧ್ಯಾಪಕರು, ಅಡ್ಮಿನಿಸ್ಟ್ರೇಟಿವ್ ಮ್ಯಾನೇಜ್ ಮೆಂಟ್ ಕಾಲೇಜು, ಕಲ್ಕೆರೆ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು.

2. ಪ್ರಾಧ್ಯಾಪಕರು, ಕನ್ನಡ ವಿಭಾಗ, ಬಿ.ಜಿ.ಎಸ್. ಬಿ ಸ್ಕೂಲ್, ಬೆಂಗಳೂರು.

ಸಾಲಿಗೆ ಸೇರುವ ಮತ್ತೊಂದು ಕತೆ 'ಅಶ್ವಾರೋಹಿ'. ಈ ಕತೆಯಲ್ಲಿ ಮಾನವೀಯ ಸಂಬಂಧಗಳು, ಮನುಷ್ಯನ ಅಂತರಂಗದಲ್ಲಿ ಒದಗುವ ಒಳನೋಟಗಳು ಮತ್ತು ಕೌಟುಂಬಿಕ ಸಂಬಂಧಗಳ ವಾಸ್ತವವಾದಿ ನೆಲೆಯನ್ನು ಪ್ರಶ್ನಿಸುತ್ತದೆ. ಅಂತಹ ಕತೆಯ ಒಳನೋಟದಲ್ಲಿ ಅಶ್ವಾರೋಹಿ ಗಮನಸೆಳೆಯುತ್ತದೆ. ಅವು:

**ಸಾಮಾಜಿಕ ಸಮಸ್ಯೆಗಳು:** ಖಾಸನೀಸರ ಕಥೆ ಸಮಾಜದಲ್ಲಿನ ಅನೇಕ ಸಮಸ್ಯೆಗಳನ್ನು ಬೆಳಕಿಗೆ ತರುತ್ತವೆ. ಅವರು ಬಡತನ, ಶೋಷಣೆ, ಅಸಮಾನತೆ, ಅನ್ಯಾಯ ಮುಂತಾದ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸುತ್ತಾರೆ.

**ಮಾನಸಿಕ ಸ್ಥಿತಿಗಳು:** ಖಾಸನೀಸರ ಕಥೆ ಮಾನಸಿಕ ಸ್ಥಿತಿಗಳಾದ ಒಂಟಿ–ತನ, ನಿರಾಶೆ, ಅಸುರಕ್ಷತೆ, ಅನುಮಾನ ಮುಂತಾದವುಗಳನ್ನು ಅನ್ವೇಷಿಸುತ್ತವೆ. ಅವರು ಈ ಸ್ಥಿತಿಗಳಿಂದ ಬಳಲುತ್ತಿರುವ ಜನರ ಜೀವನವನ್ನು ತಮ್ಮ ಕಥೆಗಳಲ್ಲಿ ಚಿತ್ರಿಸುತ್ತಾರೆ.

**ಮನುಷ್ಯನ ಸ್ವಭಾವ:** ಖಾಸನೀಸರ ಕಥೆ ಮನುಷ್ಯನ ಸ್ವಭಾವದ ವಿವಿಧ ಅಂಶಗಳನ್ನು ಅನ್ವೇಷಿಸುತ್ತವೆ. ಅವರು ಒಳ್ಳೆಯತನ ಮತ್ತು ಕೆಟ್ಟತನ, ಪ್ರೀತಿ ಮತ್ತು ದ್ವೇಷ, ಸಹಾನುಭೂತಿ ಮತ್ತು ಮನುಷ್ಯನ ನಡುವಿನ ತೊಳಲಾಟವನ್ನು ಚಿತ್ರಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಅಶ್ವಾರೋಹಿ ಕತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತಂದೆ–ತಾಯಿ ಮಕ್ಕಳಾದ ಚಾರುಮತಿ ಋತ್ವಿಕ್ ಪಾತ್ರಗಳು ಮಹತ್ವ ಪಡೆಯುತ್ತದೆ. 19ನೇ ಶತಮಾನದ ನಂತರದಲ್ಲಿ ಸಾಮಾಜಿಕ ಬದುಕು ಅನೇಕ ಹೊಸ ಮೌಲ್ಯಗಳಿಗೆ ಎದುರಾಗ ಬೇಕಾಯಿತು. ಅದು ವಸಾಹತುಶಾಹಿ ಪ್ರಕಾರದ ಆಡಳಿತ ಮತ್ತು ಹೊಸ ಶಿಕ್ಷಣ ವ್ಯವಸ್ಥೆ, ಹೊಸ ಉದ್ಯೋಗಗಳ ಕಾರಣಗಳಿಂದಾಗಿ ಒಂದೇ ಕಡೆಯಲ್ಲಿ ನಿಂತ ಸಾಮಾಜಿಕ ವ್ಯವಸ್ಥೆಯು ಹೊಸ ರೀತಿಯ ಕಂಪನಗಳಿಗೆ ಒಳಗಾಗಬೇಕಾಯಿತು. ಈ ಬದಲಾವಣೆ ಹೊಸ ರೂಪಕ್ಕೆ ನಾಂದಿಯಾಗಿದ್ದರೂ ಸಹ ಸಾಂಸ್ಕೃತಿಕವಾಗಿ ಆದ ಬದಲಾವಣೆ ಯಾವ ರೀತಿಯದು ಎನ್ನುವ ಪ್ರಶ್ನೆಯನ್ನು ಕತೆ ಕೈಗೆತ್ತಿಕೊಳ್ಳುತ್ತದೆ.

ಅಶ್ವಾರೋಹಿ ಕತೆ ಸ್ವತಂತ್ರ ಕಥಾನಕ ರಚನೆಯನ್ನು ನಮ್ಮ ಮುಂದಿಡುತ್ತಾ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ಸಮಸ್ಯೆಗಳು ನಡೆಯುವ ದಾರಿಯಲ್ಲೇ ಎಡವಿದಂತಹ ವಿಚಾರಕ್ಕೆ ನಮ್ಮನ್ನು ಹೊರೆ ಹಚ್ಚುತ್ತದೆ. ಇದಕ್ಕೆ ಸಾಕ್ಷಿ ನೀಡುವ ರೀತಿಯಲ್ಲಿ ಚಾರುಮತಿ ಮತ್ತು ಋತ್ವಿಕ್ ಪಾತ್ರಗಳು ದ್ವಂದ್ವತೆಯ ಪ್ರಧಾನ ದಾ–ರಿಯಲ್ಲಿ ಬಂದ ಹೊಸ ಮೌಲ್ಯಗಳಿಗೆ ಸಮಾಜದ ಪ್ರತಿಕ್ರಿಯೆ ಏನು ಎಂದು ಭಾವಿಸದೆ ವಿವೇಚನಾರಹಿತವಾಗಿ ವರ್ತಿಸುವುದನ್ನು ಕಾಣುತ್ತೇವೆ. ಒಂದು ಕಡೆ ಋತ್ವಿಕ್ ಹೊಸ

ಶಿಕ್ಷಣ ಪದ್ಧತಿಯಿಂದ ಸ್ವತಂತ್ರ್ಯ ಮನೋಭಾವವನ್ನು ಬೆಳೆಸಿಕೊಂಡ ಎನ್ನುವಾಗಲೇ, ಹುಳುಕುಗಳನ್ನು ತಿದ್ದಲು ಆಗದ ಮಟ್ಟಿಗೆ ತನ್ನ ಸಹಪಾಠಿಗಳಿಂದ ಮತ್ತು ಕುಟುಂಬ ವ್ಯವಸ್ಥೆಯಿಂದ ಪರಕೀಯನಾಗುತ್ತಾನೆ. ಇವೆಲ್ಲವನ್ನೂ ಸಮಚಿತ್ತದಿಂದ ನೋಡುತ್ತಿದ್ದ ಚಾರುಮತಿ ತನಗೆ ಒದಗಿ ಬಂದ ಅವಕಾಶಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಯಶಸ್ವಿಯಾಗಿ ಕೆರಿಯರ್ ಗರ್ಲ್ ಆಗಿ ಬದಲಾಗುತ್ತಾಳೆ. ಹಾಗೆಯೇ ತಂದೆಯೂ ಸಹ ವಾಸ್ತವವಾದಿ ಪಲಾಯನ ಜೀವನಕ್ರಮವನ್ನು ತನ್ನಲ್ಲಿ ಬೆಳೆಸಿಕೊಂಡಿದ್ದರಿಂದ ಹೆಂಡತಿ ಮಕ್ಕಳೊಂದಿಗೆ ಒಂದಾಗಲು ಸಾಧ್ಯವಾಗಲಿಲ್ಲ. ಆದ್ದರಿಂದ ಲೇಖಕರೇ ಸಾಂಕೇತಿಕವಾಗಿ ತಿಳಿಸುವ ನಡುಗಡ್ಡೆಯಂತೆ ಎಲ್ಲರ ಬದುಕು ಕಾಣುತ್ತದೆ. 'ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗಿಬರುತ್ತಿರಲಿಲ್ಲ. ಹೀಗಾಗಿ ಇಡೀ ಕುಟುಂಬದ ಎಲ್ಲರೂ ಒಬ್ಬರಿಗೊಬ್ಬರು ತಾತ್ವಿಕವಾಗಿ ಅಲ್ಲದೆ ಭಾವನಾತ್ಮಕವಾಗಿಯೂ ದೂರ ದೂರ ಸಿಡಿದು ಹೋಗಿದ್ದೆವು' ಎನ್ನುವಾಗ ಪೂರ್ಣಗೊಳ್ಳುತ್ತದೆ. ಇಂದಿನ ಕುಟುಂಬದ ವಾಸ್ತವತೆಯು ಕೂಡ ಇದೇ ರೀತಿಯದು ಎಂಬುದನ್ನು ಕಾಣಬಹುದು.

ನಂತರದಲ್ಲಿ ಗಂಭೀರ ವಾಸ್ತವದ ನೆಲೆಯಲ್ಲಿ ಮುಂದುವರಿಯುವ ಕಥೆ ತನ್ನ ವಿಶಿಷ್ಟ ರಚನೆಯ ದೃಷ್ಟಿಯಿಂದ ಚರ್ಚಿತವಾಗಿದೆ. ಒಂದು ಕಡೆ ಸಾಮಾಜಿಕವಾಗಿ ಮತ್ತು ವಾಸ್ತವವಾದಿ ನಡೆಯಿಂದ ಆಕರ್ಷಿತರಾದ ಚಾರುಮತಿ ಸುಖಾರಾಮ್ ಕಾಂಬಳೆಯೊಂದಿಗೆ ರಿಜಿಸ್ಟರ್ ವಿವಾಹವಾಗಿ ಆತನಿಂದ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಯಶಸ್ವಿಯಾಗುತ್ತಾಳೆ. ಹಾಗೂ ತಾನು ಅಮೇ-ರಿಕಾಗೆ ಹೋಗಿ ಅಲ್ಲೆ ನೆಲೆಸಲು ಪ್ರಯತ್ನಿಸುತ್ತಾಳೆ. ಹೀಗೆ ಪಾಶ್ಚಿಮಾತ್ಯ ಪ್ರಭಾವಕ್ಕೆ ಒಳಗಾದ ಈಕೆ ಹಳೆಯ ಸಾಮಾಜಿಕ ಸಂಬಂಧಗಳಿಗೆ ಬೆಲೆ ಕೊಡದೆ, ಹಳೆಯದರ ಅನುಕರಣೆಯೂ ಮಾಡದೆ, ಹೊಸದರ ಅನುಕರಣೆಯನ್ನು ಮಾಡದೇ, ಹಳತು-ಹೊಸತುಗಳ ಸಂಘರ್ಷಕ್ಕೆ ಒಳಗಾಗುತ್ತಾಳೆ. ಅದೇ ರೀತಿಯಲ್ಲಿ ಋತ್ವಿಕ್ ಹಣ ಮತ್ತು ಮಾದಕ ವ್ಯಸನಕ್ಕೆ ಒಳಗಾಗಿ ಮನೆಬಿಟ್ಟು ಪೊಲೀಸರ ಅತಿಥಿಯಾಗಿ ಬರುವುದು. ಈ ಸಂದರ್ಭ ನಮ್ಮ ಹೊಸ ಮೌಲ್ಯ ವ್ಯವಸ್ಥೆಯಲ್ಲಿ ಕಂಡುಬರುವ ವಿಕೃತ ಹಾಗೂ ಅನೈತಿಕತೆಯ ವ್ಯವಸ್ಥೆಯೇ ಸಾಮಾಜಿಕ ನ್ಯಾಯವಾಗಿ ಕಾಡುತ್ತದೆ. ಹೀಗೆ ಬದುಕಿನ ಸೂಕ್ಷ್ಮ ವಾಸ್ತವತೆಯನ್ನು ಪ್ರಾಮಾಣಿಕವಾಗಿ ಕತೆ ತನ್ನಲ್ಲಿ ತೆರೆದಿಡುತ್ತದೆ. ಅದಕ್ಕೆ ಚಿಕಿತ್ಸಕ ದೃಷ್ಟಿಯಲ್ಲಿ ಕಥೆಯೇ ಪ್ರತಿಕ್ರಿಯಿಸುವ ತಂತ್ರವನ್ನು ಸಹ ಕಾಣಬಹುದಾಗಿದೆ.

ಮದುವೆಯಾಗಿ ಕಾಲಹರಣ ಮಾಡುವ ಹಾಗೂ ತನ್ನ ಸ್ವಂತಿ-ಕೆಯನ್ನು ಕಳೆದುಕೊಂಡು, ಗಂಡನನ್ನು ಸಂಭಾಳಿಸಿಕೊಂಡು ತಾನು ಯಾವುದೇ ಸಂಘರ್ಷಗಳಿಗೆ ದಾರಿ ಮಾಡಿಕೊಡದೆ ಅಂತರ್ಮುಖಿಯಾಗಿ, ಪರಂಪರೆ ಮತ್ತು ಧಾರ್ಮಿಕ ವಿಕೃತಿಯ ನಿಯಮಗಳಿಗೆ ಎದುರಾಗದೇ ಜಿಗುಪ್ಸೆಯನ್ನು ಹೊರ ಹಾಕದೆ

ಸಾಮಾಜಿಕ ಬಂಧಗಳಿಗೆ ಬೆಲೆ ಕೊಡುತ್ತಾ ಕಾಲದ ವಾಸ್ತವತೆಯಲ್ಲಿ ಒಂದಾಗುವ ಚಾರುಮತಿ ಮತ್ತು ಋತ್ವಿಕ್ ಕಾಣಸಿಗುತ್ತಾರೆ.

ತಾಯಿ ನೇರ ಸಂಘರ್ಷಕ್ಕೆ ಇಳಿಯದೆ ಮೌಲ್ಯಗಳ ತೀವ್ರವಾದ ಸರಳರೇಖಾತ್ಮಕ ರೀತಿಯಲ್ಲಿ ವರ್ತಿಸುತ್ತಾಳೆ. ಇದು ಚಾರುಮತಿ ಮತ್ತು ಋತ್ವಿಕ್ ಜೀವನದಲ್ಲಿ ಬೇರೆಯದೇ ರೀತಿಯ ಪರಿಣಾಮಬೀರುತ್ತದೆ. ಒಂದು ಕಡೆ ಮದುವೆಯಾಗಿ ಸಾಮಾಜಿಕ ಸಂಸ್ಥೆಯ ಬಂಧನಕ್ಕೆ ಒಳಗಾದ ಚಾರುಮತಿ ಪುರುಷ ಪ್ರಧಾನ ವ್ಯವಸ್ಥೆಯೊಂದು ಹೆಣ್ಣಿನ ಬಗ್ಗೆ ಮದುವೆಯಂತಹ ಧೋರಣೆಯ ಅಸ್ಪಷ್ಟತೆ ನಿಲುವಿಗೆ ಒಳಗಾಗುತ್ತಾಳೆ. ಇದು ವ್ಯವಹಾರದ ರೀತಿಯಲ್ಲಿ ಕಂಡರೂ ನಂತರದಲ್ಲಿ ಋತ್ವಿಕ್‌ನ ಜೀವನದಲ್ಲಿ ನಡೆಯುವ ಕೆಲವು ಘಟನೆಗಳು ಆಕೆಯನ್ನು ಬದಲಾಯಿಸಿ ವಿವಾಹ ವಿಚ್ಛೇದನದಿಂದ ಹೊರಬರುವಂತೆ ಮಾಡುತ್ತದೆ.

ಎಲ್ಲಾ ಆಧುನಿಕ ವ್ಯವಸ್ಥೆಯಲ್ಲಿ ಏಕಮುಖವಾಗಿ ಸಂಚರಿಸುವ ಭ್ರಷ್ಟಾಚಾರ, ಲಂಚ ಮುಂತಾದ ಸಮಸ್ಯೆಗಳಿಂದ ನ್ಯಾಯವಾಗಿ ಬದುಕಬೇಕೆಂಬ ಋತ್ವಿಕ್‌ನನ್ನು ವಿಪಲಗೊಳಿಸುತ್ತದೆ. ಇದು ಒಂದು ಕಡೆಯಾದರೆ ವಸಾಸಹತುಶಾಹಿ ಪ್ರದೇಶದಿಂದ ಸಮಾಜವೊಂದರಲ್ಲಿ ಪ್ರಾರಂಭವಾದ ಚಲನೆಯು ಸುಧಾರಣೆಯನ್ನು ತೋರುವುದನ್ನು ಬಿಟ್ಟು ಅಲ್ಲೇ ವಿರುದ್ಧವಾದ ಸಂಘರ್ಷದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಇದರಿಂದ ಹತಾಶನಾದ ಋತ್ವಿಕನಿಗೆ 'ಒಂದು ಕಡೆಯಲ್ಲಿ ಹೆಜ್ಜೆಹೆಜ್ಜೆಗೂ ಅಪಾಯ ಗಂಡಾಂತರಗಳು ಕಾಯ್ದಿದ್ದವು ಹಾಗೂ ನಿರಾಯುಧವಾಗಿ ಚಕ್ರವ್ಯೂಹವನ್ನು ಹೊಕ್ಕ ಅಭಿಮನ್ಯುವಿನಂತೆ ಋತ್ವಿಕ್ ಜನಜಂಗುಳಿಯ ಮಧ್ಯೆ ಹೊಕ್ಕು ಬಿಟ್ಟಿದ್ದ, ಆದರೆ "ಗೆದ್ದು ಗುರಿ ಮುಟ್ಟುವುದು ಒಂದೇ ಅವನ ಆಸೆಯಾಗಿ–ತ್ತು. ಮರಳುವ ಪ್ರಶ್ನೆಯೇ ಇರಲಿಲ್ಲ" ಎನ್ನುವಾಗ ಸಮಾಜದ ಸಂಬಂಧಗಳೊಂದಿಗೆ ದ್ವಂದ್ವ ವಿನ್ಯಾಸದ ಮುಖಾಮುಖಿಯ ಸಂಘರ್ಷ ಅನಾವರಣಗೊಳ್ಳುತ್ತದೆ. ವಾಸ್ತವವಾಗಿ ಸಮಾಜ ಬದಲಾಗಬೇಕೆಂಬ ನಿಲುವು ಇದ್ದರೂ ಅದನ್ನು ವಿಶ್ಲೇಷಣಾ ದೃಷ್ಟಿಯಿಂದ ಋತ್ವಿಕ್ ನೆಲೆಯಲ್ಲಿ ಗಮನಿಸಿದರೆ ಅದು ವಿಷಾದದ ವ್ಯಾಪ್ತಿಯನ್ನು ಆವರಿಸಿದೆ ಇರದು.

ಈ ಭ್ರಷ್ಟತೆಯಲ್ಲಿ ವಿಚ್ಚಿದ್ರವಾದ ಋತ್ವಿಕ್ "ನಿಮ್ಮಂತಹ ನರಸತ್ತ ಪುಕ್ಕಲು ತಂದೆಯ ಮಗನಾಗಿ ಹುಟ್ಟಿರುವುದು ನನಗೊಂದು ಶಾಪವಾಗಿದೆ. ಈ ಶಾಪದಿಂದ ವಿಮೋಚನೆಗಾಗಿ ಅಂಬಲಿಸಿದ್ದೇನೆ".[1] ಎಂದು ತಂದೆಯನ್ನು ಆಪಾದಿಸುವಾಗ ತಾನು ಸಮಾಜದಿಂದ, ಸಮಾಜಿಕ ವ್ಯವಸ್ಥೆಯಿಂದ ಅನುಭವಿಸಿದ ಹಿಂಸೆಯ ಕ್ರೌರ್ಯವನ್ನು ವ್ಯಕ್ತಪಡಿಸುತ್ತಾನೆ. ಅಷ್ಟೇ ಅಲ್ಲದೆ ಸಮಾಜದ ದೌರ್ಬಲ್ಯಗಳಾದ ಮೂಢನಂಬಿಕೆಯನ್ನು ಸರಿಪಡಿಸಲು ಆಗ್ರಹಿಸುತ್ತಾನೆ. ಇವೆಲ್ಲಾ ಒಂದು ಮಾದ–

ರಿಯಾಗಿ ಮಹತ್ವ ಪಡೆಯುತ್ತಿದ್ದರೆ, ನಡುಗಡ್ಡೆಯ ಚಿತ್ರಣ ಪೂರ್ಣವಾದ ಸಾವಿನ ಏಕಾಕಿತನದೊಂದಿಗೆ ಮತ್ತೆ ಮುಂದೆ ಬರುತ್ತದೆ. ಇಲ್ಲಿ ಕಾಣುವ ಕಾಗೆ ಸಾಂಕೇತಿ–ಕವಾಗಿ ಸಾಮಾಜಿಕ ಸಂಬಂಧಗಳು ಯಾವುದೇ ಒತ್ತಡಗಳಿಗೆ ಮತ್ತು ಬದಲಾವಣೆಗೆ ತೆರೆದರು ಸಹ ವ್ಯಕ್ತಿಗಳು ತಮ್ಮ ಅಂತರಂಗವನ್ನು ಪರಸ್ಪರ ಸಂಬಂಧಗಳನ್ನು ಮುಕ್ತವಾಗಿಸಬೇಕು, ಎನ್ನುವ ಸ್ವರೂಪವನ್ನು ಪಡೆಯುತ್ತದೆ. 'ಸುಖ–ದುಃಖಗಳು ಇವೆರಡೂ ಬಹಳ ವಂಚಕ ಶಬ್ದಗಳು' ಎನ್ನುವಾಗ ಸ್ಪಷ್ಟವಾಗುತ್ತದೆ. ಹೀಗೆ ಧಾರ್ಮಿಕ, ಸಾಮಾಜಿಕ ಮತ್ತು ಸಾಮಾಜಿಕ ವ್ಯವಹಾರ ಸಂಬಂಧಗಳು ಮೌಲ್ಯಗಳೊಂದಿಗೆ ಪೂರ್ತಿಯಾಗಿ ಬದಲಾಗದ ಹೊರತು ಆಧುನಿಕ ವಿದ್ಯಾಭ್ಯಾಸ, ವ್ಯವಹಾರ ಪ್ರಸಂಗಗಳು ಹಾಗೂ ಸಾಮಾಜಿಕ ಸಂಬಂಧಗಳು ಸುಧಾರಿಸಿಕೊಳ್ಳಲು ಸಾಧ್ಯವಿಲ್ಲ. ಇದು 'ಸಮಾಜ ಗಂಭೀರವಾಗಿ ಪರಿಗಣಿಸಬೇಕಾದ ವಿಷಯ' ಇಷ್ಟಾದರೂ ಅಶ್ವರೋಹಿ ಹಿಮದಿಂದ ಹೆಪ್ಪುಗಟ್ಟಿದ ನೆಲದ ಸರೋವರವನ್ನು ಹುಡುಕಿ ಬರುವುದು ಮತ್ತು ದಾರಿ ಗುರುತಿಸಲಾಗದಿರುವುದು, ತಬ್ಬಿಬ್ಬಾಗಿ ಗುಂಪೊಂದನ್ನು ಗಮನಿಸಿ ಕುದುರೆಯನ್ನು ನಿಲ್ಲಿಸಿ ನಿಂತಿರುವುದು ನೀರಿನ ಮೇಲಿನ ತೆಳ್ಳಗೆ ಹೆಪ್ಪುಗಟ್ಟಿದ ಹಿಮ ಎಂದು ತಿಳಿಯುವ ಮೊದಲೇ ಸಿಕ್ಕಿಕೊಳ್ಳುತ್ತಾನೆ. ಇದು ವಾಸ್ತವತೆಗೆ ಮತ್ತೆ ಹಿಡಿದ ಕೈಗನ್ನಡಿಯಂತೆ ಸೂಚಿತವಾಗುತ್ತದೆ. ಹೀಗೆ ಮೊದಲೇ ಪಾಶ್ಚಾತ್ಯ ವಿಚಾರ ಮತ್ತು ತತ್ವ–ಸಿದ್ಧಾಂತಗಳಿಗೆ ಮಾರುಹೋಗದೆ ಸನಾತನ ವ್ಯವಸ್ಥೆಯ ಮೂಢನಂಬಿಕೆಯನ್ನು ವಿರೋಧಿಸಿ, ಸಾಮಾಜಿಕ ಸಂಬಂಧದ ಸಿದ್ಧಾಂತಿಕ ಸಮತೋಲನವನ್ನು ಕಾಯ್ದುಕೊಳ್ಳುವುದು ಮುಖ್ಯವೆನಿಸುದು ಅಶ್ವರೋಹಿ ಕತೆಯಲ್ಲಿ ಕಾಣಬಹುದಾಗಿದೆ.

**ಅಡಿಟಿಪ್ಪಣಿ:**

1. ರಾಘವೇಂದ್ರ ಖಾಸನೀಸ, ರಾಘವೇಂದ್ರ ಖಾಸನೀಸ ಸಮಗ್ರ (2011), ಮನೋಹರ ಗ್ರಂಥಮಾಲೆ, ಧಾರವಾಡ, ಪು.ಸಂ. XV

**ಪರಾಮರ್ಶನ ಗ್ರಂಥಗಳು:**

2. ರಾಘವೇಂದ್ರ ಖಾಸನೀಸ, ರಾಘವೇಂದ್ರ ಖಾಸನೀಸ ಸಮಗ್ರ (2011), ಮನೋಹರ ಗ್ರಂಥಮಾಲೆ, ಧಾರವಾಡ.